## 2015 ಕ.ತೀ.ವ. 361

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

## ಎಲಿಕ್ಸೈರ್ ಎಂಟರ್ ಪ್ರೈಸಸ್ ಮತ್ತು ಹೋಟೆಲ್‌ಗಳು ಪ್ರೈವೇಟ್ ಲಿಮಿಟೆಡ್ –ವಿರುದ್ಧ– ಶ್ರೀ ಎಂ.ಫೌದ್ ಮುಸ್ವಿ ಮತ್ತು ಮತ್ತೊಬ್ಬರು *

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ಒಂದನೇ ಎದುರುದಾರರು ಟ್ರಸ್ಟಿಗೆ ಫಲಾನುಭವಿಯಾಗಿದ್ದು ರಿಟ್ ಅರ್ಜಿದಾರರು ತಮ್ಮ ಗಮನಕ್ಕೆ ತರದೆ ಮತ್ತು ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಟ್ರಸ್ಟಿನ ಸ್ವತ್ತನ್ನು 30 ವರ್ಷಗಳಿಗೆ ಗುತ್ತಿಗೆ ನೀಡಿದ್ದಾರೆಂದು ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುತ್ತಾರೆ. ಸಂಕೀರ್ಣ ನಡವಳಿಗಳಲ್ಲಿ ಒಂದನೇ ಎದುರುದಾರರನ್ನು ಆಲಿಸಬೇಕೆಂದು ಆದೇಶಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿಗಳು.**

**ವಕ್ಫ್‌ಗೆ 56 ಜನ ಫಲಾನುಭವಿಗಳಿದ್ದು ಅಧಿವಿಚಾರಣಾ ನ್ಯಾಯಾಲಯವು ಆ ಎಲ್ಲಾ ಫಲಾನುಭವಿಗಳಿಗೆ ಸೂಕ್ತವಾಗಿ ಸೂಚನೆಯನ್ನು ಜಾರಿಮಾಡಿ, ನಂತರ ಅವರನ್ನು ಆಲಿಸಿ ನಡವಳಿಗಳನ್ನು ಆರು ತಿಂಗಳೊಳಗಾಗಿ ಬಗೆಹರಿಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನವನ್ನು ನೀಡಿ ಸದರಿ ರಿಟ್ ಅರ್ಜಿಗಳನ್ನು ವಿಲೇಖಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
| --- | --- |
| *1. (1916) 43, ಐ.ಎ. 127 ಮೊಹಮ್ಮದ್ ಇಸ್ಮಾಯಿಲ್ –ವಿರುದ್ಧ– ಅಹ್ಮದ್ ಮೂಲಿಯಾ* | *(ಉಲ್ಲೇ) 2* |

* ರಿಟ್ ಅರ್ಜಿ ಸಂ. 18382/2011 ಹಾಗೂ ಇತರೆ (ಜಿಎಂ–ಸಿಪಿಸಿ), ದಿನಾಂಕ: 12ನೇ ಆಗಸ್ಟ್, 2014.

*2. (2008) 12 ಎಸ್‌ಸಿಸಿ 481*
*ಕೆ.ಡಿ. ಶರ್ಮ –ವಿರುದ್ಧ–*
*ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ (ಉಲ್ಲೇ) 19*

*3. (1996) 5 ಎಸ್‌ಸಿಸಿ 550*
*ಇಂಡಿಯನ್ ಬ್ಯಾಂಕ್ –ವಿರುದ್ಧ–*
*ಸತ್ಯಂ ಫೈಬರ್ಸ್ ಇಂಡಿಯಾ ಲಿಮಿಟೆಡ್ (ಉಲ್ಲೇ) 19*

*4. 1975 (1) ಕೆಎಆರ್.ಎಲ್.ಜೆ 58*
*ಯೂಸಫ್ ನಸ್ವೀ –ವಿರುದ್ಧ– ಶ್ರೀ ದೇವಸುಂದರ್ (ಉಲ್ಲೇ) 21*

**ರಿಟ್ ಅರ್ಜಿ ಸಂಖ್ಯೆ: 18382/2011**

ಅರ್ಜಿದಾರರ ಪರ : ಡಿ.ಎಲ್.ಎನ್. ರಾವ್, ಹಿರಿಯ ವಕೀಲರು
ಶ್ರೀ ಆರ್.ವಿ.ಎಸ್. ನಾಯಕ್ – ವಕೀಲರು ;
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಂ.ಜಿ. ಜಾವೀದ್ ಅಹ್ಮದ್ ಖಾನ್
– ವಕೀಲರು
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಆರ್. ಶ್ರೀಧರ್.

**ರಿಟ್ ಅರ್ಜಿ ಸಂಖ್ಯೆ: 18383/2011 :**

ಅರ್ಜಿದಾರರ ಪರ : ಶ್ರೀ ಆರ್. ಶ್ರೀಧರ್ – ವಕೀಲರು
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಂ.ಜಿ. ಜಾವೀದ್ ಅಹ್ಮದ್ ಖಾನ್
– ವಕೀಲರು ;
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ.ಎಲ್.ಎನ್. ರಾವ್ –ಹಿರಿಯ ವಕೀಲರು,
ಶ್ರೀ ಆರ್.ವಿ.ಎಸ್ ನಾಯಕ್ – ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ** :

ಅರ್ಜಿದಾರರು ಒಂದೇ ಆದೇಶದಿಂದ ಬಾಧಿತರಾಗಿರುವುದರಿಂದ, ಈ ಸಾಮಾನ್ಯ ಆದೇಶದಿಂದಲೇ ಈ ರಿಟ್ ಅರ್ಜಿಗಳನ್ನು ವಿಲೆ ಮಾಡಲಾಗಿರುತ್ತದೆ. ಈ ಅರ್ಜಿಗಳ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ :

2. ಈ ಅರ್ಜಿಗಳ ಮೊದಲ ಅರ್ಜಿದಾರ-ಕಂಪನಿಯು ಒಂದು ಖಾಸಗಿ ನಿಯಮಿತ ಕಂಪನಿಯಾಗಿರುತ್ತದೆ. ಈ ಅರ್ಜಿಗಳ ಎರಡನೇ ಅರ್ಜಿದಾರರು, ಮೊಹಮದ್ ಮೊಸಾ ಸೈಟ್ ವಕ್ಫ್ ಎಂದು ಹೆಸರಾದ, ಮೊಹಮದೀಯ ಕಾನೂನು (ವಕ್ಫ್-ಉಲ್-ಔಲಾದ್) ನಡಿಯಲ್ಲಿ ಸೃಜಿಸಿದ ಖಾಸಗಿ ನ್ಯಾಸದ ಮುತಾವಲಿಯೆಂದು ಹೇಳಲಾಗಿದೆ. ಸದರಿ ಮುತಾವಲಿಯು, ***ಮೊಹಮದ್ ಇಸ್ಮಾಯಲ್ -ವಿರುದ್ಧ- ಅಹ್ಮದ್ ಮೂಲಿಯಾ*** [1], ಪ್ರಕರಣದಲ್ಲಿ ಪ್ರಿವಿ ಕೌನ್ಸಿಲ್‌ನ ನ್ಯಾಯಿಕ ಸಮಿತಿಯ ನಿರ್ಣಯದೊಂದಿಗೆ ಆರಂಭವಾದ ನ್ಯಾಯಿಕ ಪೂರ್ವನಿದರ್ಶನದಿಂದ ಸಿವಿಲ್ ನ್ಯಾಯಾಲಯದಲ್ಲಿ ಪ್ರದತ್ತವಾಗವಾಗಬೇಕಾದಂಥ 'ಖಾಜಿ' (ಷರಿಯತ್ ಮಾರ್ಗದರ್ಶನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 'ಧಾರ್ಮಿಕ' ನ್ಯಾಯಾಧೀಶ)ಯ ಅಧಿಕಾರವನ್ನು ಕೋರಿ, ಬೆಂಗಳೂರಿನಲ್ಲಿನ ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

3. ಈ ವಕ್ಫ್, 30.10.1920ರಂದು ನೋಂದಾಯಿತ ಪತ್ರದಡಿಯಲ್ಲಿ ಮೊಹಮ್ಮದ್ ಮುಸಾ ಸೇಟ್‌ರವರಿಂದ ಸೃಜಿಸಲ್ಪಟ್ಟಿರುತ್ತದೆ. ಇದರ ಫಲಾನುಭವಿಗಳು ಶಾಶ್ವತವಾಗಿ ಇವರ ಮಕ್ಕಳು ಮತ್ತು ಇತರ ವಂಶಜರೇ ಆಗಿದ್ದು, ಉತ್ತರಾಧಿಕಾರಿಗಳು ಇಲ್ಲದಿದ್ದ ಸಂದರ್ಭದಲ್ಲಿ ಯಾರಾದರೂ ಬಡವರು ಆಗಿರುತ್ತಾರೆ. ನ್ಯಾಸದ

1. (1916) 43 ಎಲ್.ಎ. 127

ನಿಬಂಧನೆಗಳು, ಮಾರಾಟದ ರೂಪದಲ್ಲಿ ಸ್ವತ್ತನ್ನು ಪರಭಾರೆ ಮಾಡಲು ಅಥವಾ ಮೂರು ವರ್ಷಗಳು ಮೀರಿದ ಯಾವುದೇ ಅವಧಿಗೆ ಸ್ವತ್ತನ್ನು ಅಡಮಾನ ಮಾಡಲು ಅಥವಾ ಗುತ್ತಿಗೆಗೆ ನೀಡಲು ಅಥವಾ ಮೂರು ತಿಂಗಳುಗಳು ಮೀರಿದ ಅವಧಿಗೆ ಯಾವುದೇ ಬಾಡಿಗೆ ಮುಂಗಡಗಳನ್ನು ಪಡೆಯಲು ಮುತಾವಲಿಯ ಅಧಿಕಾರದ ಮೇಲೆ ನಿರುಪಾಧಿಕ ನಿರ್ಬಂಧವಿರುತ್ತದೆ. ಈ ಹಿನ್ನೆಲೆಯಲ್ಲಿ, ವಕ್ಫ್ ಸ್ವತ್ತಿನ ಹಲವಾರು ಬಾಬುಗಳ ಪೈಕಿ ಒಂದರ ಸಂಬಂಧದಲ್ಲಿ ಈ ಮುಂದೆ ಅನುಷ್ಠಾನಗೊಳಿಸಿದ ಗುತ್ತಿಗೆ ಪತ್ರದ ಪ್ರಸ್ತಾಪಿತ ವ್ಯತ್ಯಾಸದ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ಮುತಾವಲಿಯನ್ನು ನಿಬಂಧಿಸಲಾಗಿರುತ್ತದೆ.

4. ಬೆಂಗಳೂರಿನ ಜನರಲ್ ಕಾರ್ಯಪ್ಪ ರಸ್ತೆಯ (ಅಂದಿನ ಸಂಖ್ಯೆ 135, ರೆಸಿಡೆನ್ಸಿ ರಸ್ತೆ) ಸುಮಾರು 94717 ಚದರ ಅಡಿ ಅಳತೆಯ ಸ್ಥಿರ ಸ್ವತ್ತು / ಕಟ್ಟಡ ಸಂ. 12ಕ್ಕೆ ಮುತಾವಲಿಯು, ಈ ಅರ್ಜಿಗಳಲ್ಲಿನ ಮೊದಲ ಅರ್ಜಿದಾರರಾದ ಮೆಸರ್ಸ್ ಎಲಿಕ್ಸೈರ್ ಎಂಟರ್ ಪ್ರೈಸಸ್ ಅಂಡ್ ಹೋಟೆಲ್ ಪ್ರೈವೇಟ್ ಲಿ., ಇವರಿಗೆ 50 ವರ್ಷಗಳ ಅವಧಿಗೆ 1973ನೇ ವರ್ಷದಲ್ಲಿ ಭೋಗ್ಯವನ್ನು ನೀಡಿರುತ್ತದೆ., ಭೋಗ್ಯದ ನಿಬಂಧನೆಗಳಲ್ಲಿ ನಿರ್ಮಿಸಬೇಕೆಂದಿದ್ದ ಕಟ್ಟಡ ನಿರ್ಮಾಣವನ್ನು ಆರಂಭಿಸದಿದ್ದುದರಿಂದ, ಉಳಿಸಿಕೊಂಡ ಪ್ರದೇಶದ ಸಂಬಂಧದಲ್ಲಿ ತಳಮಹಡಿಯ ಬಾಡಿಗೆಯನ್ನು ಹೆಚ್ಚಿಸುವಾಗ ಮತ್ತು 1.8.1988ರಿಂದ 31.7.2038ರವರೆಗಿನ ಭೋಗ್ಯದ ಅವಧಿಯನ್ನು ವ್ಯತ್ಯಾಸಗೊಳಿಸುವಾಗ 24000 ಚದರಡಿ ವ್ಯಾಪ್ತಿಯಷ್ಟನ್ನು ಗೇಣಿದಾರನು ಅಧ್ಯರ್ಪಿಸುವುದರೊಂದಿಗೆ, ಸಿವಿಲ್ ನ್ಯಾಯಾಲಯದ ಎದುರು ದಾಖಲು ಹರಾಜಿನೊಂದಿಗೆ ಮುಕ್ತಾಯವಾದಂಥ, ಭೋಗ್ಯದ ಪತ್ರದ ರದ್ದತಿಗೆ ಸಂಬಂಧಿಸಿದಂತೆ, ಹೆಚ್ಚಿನ ವ್ಯವಹರಣೆಗಳನ್ನು ಆರಂಭಿಸಿರುವುದು ಕಂಡುಬರುತ್ತದೆ. ಸದರಿ ವಿಸ್ತರಿತ ಭೋಗ್ಯದ ಅವಧಿಯನ್ನು ಅನುಸರಿಸಿ, ಗೇಣಿದಾರನು, ಮೂರು ತಳಮಹಡಿಗಳನ್ನು, ಒಂದು ನೆಲ ಮತ್ತು ನಡುವಣ ಮಹಡಿ ಮತ್ತು ಒಂಬತ್ತು ಮೇಲಂತಸ್ತುಗಳನ್ನು ಒಳಗೊಂಡ 3 ಲಕ್ಷ ಚದರಡಿಯ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಬೇಕೆಂದು ಹೇಳಿರುತ್ತಾರೆ.

5. ಮೇಲೆ ಹೇಳಿದಂತೆ ನಿರ್ಮಾಣವು ಪೂರ್ಣಗೊಂಡ ತರುವಾಯ, ಅತ್ಯಂತ ಅನಿರೀಕ್ಷಿತ ರೀತಿಯಲ್ಲಿ ಹಿಂದೆಂದೂ ಕಾಣದಂತೆ, ಬಾಡಿಗೆಗಳಲ್ಲಿ ಅತ್ಯಂತ ಹೆಚ್ಚಳ ಉಂಟಾಗಿರುವುದು ಮತ್ತು ಭೂಮಿಯ ಮೌಲ್ಯದಲ್ಲಿ ಹೆಚ್ಚಳ ಉಂಟಾಗಿರುವುದನ್ನು ಪರಿಗಣಿಸಿ, ಪಕ್ಷಕಾರರು, ಗೇಣಿಯ ನಿಬಂಧನೆಗಳನ್ನು ಮತ್ತೊಮ್ಮೆ ರೂಪಿಸಿ, ಅದನ್ನು ಅನುಷ್ಠಾನಗೊಳಿಸಬೇಕೆಂದು ಪ್ರಸ್ತಾಪಿಸಿದ ಗೇಣಿಪತ್ರದ ಕರಡನ್ನಾಗಿ ಸೇರಿಸಿಕೊಳ್ಳಬೇಕಾದಂಥ ಅಧಿಕೃತ ಜ್ಞಾಪನದಡಿಯಲ್ಲಿ ದಾಖಲಿಸಿರುತ್ತಾರೆ. ಮತ್ತು ಮೇಲೆ ಹೇಳಿದಂತೆ, ಸಂಕೀರ್ಣ ಸಂ. 938/2006ರಲ್ಲಿ ಅರ್ಜಿಯನ್ನು ಪ್ರಸ್ತಾವಿತ ಗೇಣಿ ಪತ್ರವನ್ನು ಅನುಷ್ಠಾನಗೊಳಿಸಲು, ನ್ಯಾಯಾಲಯದ ಅನುಮತಿಯನ್ನು ಕೋರಿ ಸದರಿ ದಸ್ತಾವೇಜುಗಳನ್ನು ಲಗತ್ತಿಸಿ ಸಿವಿಲ್ ನ್ಯಾಯಾಲಯದ ಎದುರು ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಅರ್ಜಿಯನ್ನು ಅಂಗೀಕರಿಸುವಾಗ, ಮಾನ್ಯ ನ್ಯಾಯಾಧೀಶರು, ಆದೇಶವನ್ನು ಸಮರ್ಥಿಸಿರುತ್ತಾರೆ :

> "6. 14.12.1988ನೇ ದಿನಾಂಕದ ಗುತ್ತಿಗೆ ಪತ್ರದಲ್ಲಿ ನಿರ್ದಿಷ್ಟಪಡಿಸಿದ, ಹಳೆಯ ದರಗಳ ಪ್ರಕಾರ 1,05,45,000/– ರೂ.ಗಳಿಗೆ ಪ್ರತಿಯಾಗಿ 1.1.2006ರಿಂದ 31.7.2038ರ ಅವಧಿಗೆ ಸಂಬಂಧಿಸಿದಂತೆ, 77,35,64,908/– ರೂ.ಗಳಷ್ಟು ಗೇಣಿಯನ್ನು ಸ್ವೀಕರಿಸುವ ಮೂಲಕ ಅರ್ಜಿದಾರ ವಕ್ಫ್ ಮಂಡಳಿಯು ಪಡೆಯಬಹುದೆಂಬ ಮೊಬಲಗಿನಲ್ಲಿನ ಹೆಚ್ಚಳದ ಲೆಕ್ಕಾಚಾರದೊಂದಿಗೆ ಅರ್ಜಿಯ ದೃಢೋಕ್ತಿಗಳ ಮತ್ತು ಪಿ.ಡಬ್ಲ್ಯೂ.1ರ ಸಾಕ್ಷ್ಯದ ಪರಿಶೀಲನೆ ಸೇರಿಕೊಂಡಿರುತ್ತವೆ. ಮುಂದುವರೆದು, 14.11.2006ನೇ ದಿನಾಂಕದ ಗೇಣಿಗೆ ಕ್ರಯಪತ್ರ ಮತ್ತು ನಿಶಾನೆ ಪಿ.2 ಮತ್ತು 3 ಆಗಿರುವಂಥ ಅಧಿಕೃತ ಜ್ಞಾಪನಗಳು ಮಾಸಿಕ ಒಂದು ಚದರ ಅಡಿಗೆ 55 ರೂ.ಗಳ ದರದಲ್ಲಿ 35,000 ಚದರಡಿಗಳ ಹೆಚ್ಚುವರಿ ಜಾಗವನ್ನು ಭೋಗ್ಯ ನೀಡುವ

ಮೂಲಕ ವಕ್ಫ್‌ನಿಂದ ಸ್ವೀಕರಿಸಬಹುದಾದುದೆಂಬ ಬಾಡಿಗೆಗಳನ್ನು ಒಳಗೊಂಡಂತೆ, ಮೇಲಿನ ಅಂದರೆ, 1.1.2006ರಿಂದ 31.7.2038ರವರೆಗೆ ಮತ್ತು 1.8.2038ರಿಂದ 31.7.2088ರವರೆಗೆ ಪ್ರಸ್ತಾಪಿಸಿದ ಎರಡೂ ಅವಧಿಗೆ 31.7.2088ರವರೆಗೆ 115,50,00,000/– ರೂ.ಗಳ ಮೊಬಲಗನ್ನು ಅರ್ಜಿದಾರ ವಕ್ಫ್ ಸಂಸ್ಥೆ ಸ್ವೀಕರಿಸಿರುತ್ತದೆಂಬುದನ್ನು 14.11.2006ನೇ ದಿನಾಂಕದ ಗುತ್ತಿಗೆ ಪತ್ರ ಮತ್ತು ಪಿ.ಡಬ್ಲ್ಯೂ.1ರ ಸಾಕ್ಷ್ಯದೊಂದಿಗೆ ಸೇರಿಕೊಂಡ ನಿಶಾನೆ ಪಿ.2 ಮತ್ತು 3ರಲ್ಲಿರುವಂಥ ಅಧಿಕೃತ ಜ್ಞಾಪನವು ಬಹಿರಂಗಪಡಿಸುತ್ತದೆ. ಆದ್ದರಿಂದ ನನ್ನ ಪ್ರಕಾರ, ಪಿ.ಡಬ್ಲ್ಯೂ.1ರ ಸಾಕ್ಷ್ಯದೊಂದಿಗೆ ಮತ್ತು ಅಧಿಕೃತ ಜ್ಞಾಪನದಲ್ಲಿ ಮತ್ತು ಅದರೊಂದಿಗೆ ಲಗತ್ತಿಸಿದ ಕರಡು ಗುತ್ತಿಗೆ ಪತ್ರವನ್ನು ರೂಪಿಸುವಲ್ಲಿನ, ನಿಬಂಧನೆ ಮತ್ತು ಷರತ್ತುಗಳೊಂದಿಗೆ ಸೇರಿಕೊಂಡ ಅರ್ಜಿಯಲ್ಲಿ ರೂಪಿಸಿದ ದೃಢೋಕ್ತಿಗಳಿಗೆ ಸಂಬಂಧಿಸಿದಂತೆ, ಅರ್ಜಿದಾರ ವಕ್ಫ್ ಸಂಸ್ಥೆಯು, ಈಗಿರುವ ಭೋಗ್ಯವನ್ನು ಅದರಲ್ಲಿ ರೂಪಿಸಿರುವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ 31.7.2088ರವರೆಗೆ ಪರಿಷ್ಕರಿಸಿದಲ್ಲಿ ಮತ್ತು ವಿಸ್ತರಿಸಿದಲ್ಲಿ ಗಣನೀಯವಾಗಿ ಸೌಲಭ್ಯವನ್ನು ಪಡೆದುಕೊಳ್ಳುತ್ತದೆ. ಈಗಾಗಲೇ ಹೇಳಲಾದಂತೆ, ಈ ನ್ಯಾಯಾಲಯವು ನ್ಯಾಸ ಅಧಿನಿಯಮದ 36ನೇ ಪ್ರಕರಣದಡಿಯಲ್ಲಿ ಅರ್ಜಿದಾರ ವಕ್ಫ್ ಮಂಡಳಿಯು ಎಲಿಕ್ಸೈರ್ ಎಂಟರ್ ಪ್ರೈಸಸ್ ಅಂಡ್ ಹೋಟೆಲ್ಸ್ ಪ್ರೈ., ಲಿಮಿಟೆಡ್‌ನೊಂದಿಗೆ ಮಾಡಿಕೊಂಡಿರುವ ಕರಾರನ್ನು ಪರಿಷ್ಕರಿಸುವ ಮತ್ತು ವಿಸ್ತರಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಲ್ಲದೆ, ನಾನು ನನ್ನ ಅಭಿಪ್ರಾಯಕ್ಕೆ ಪೂರಕವಾಗಿರುವಂಥ ***ಯೂಸಫ್ ನಕ್ವಿ –ವಿರುದ್ಧ–***

***ಶ್ರೀ ದೇವಸುಂದರ್ ಮತ್ತು ಇತರರು*** – 1975 (1) ಕರ್ನಾಟಕ ಕಾನೂನು ಪತ್ರಿಕೆ ಪುಟ–58 ಪ್ರಕರಣದಲ್ಲಿ ಹೇಳಲಾದ ತತ್ವಗಳನ್ನು ಉದಾಹರಿಸುತ್ತೇನೆ. ನಾನು ಸದರಿ ನಿವೇದನೆಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಮೇಲಿನ ತೀರ್ಪಿನಲ್ಲಿ ಹೇಳಿದ ತತ್ವಗಳು, ನ್ಯಾಸ ಅಧಿನಿಯಮದ 36ನೇ ಪ್ರಕರಣದಡಿಯಲ್ಲಿ ಉದ್ದೇಶಿಸಿರುವುದನ್ನು ಭದ್ರಪಡಿಸಿರುವುದರಿಂದ ಅದರ ಮೇಲೆ ಉದಾಹರಿಸುವ ಮೂಲಕ ಈ ಅರ್ಜಿಯಲ್ಲಿ ಪ್ರಾರ್ಥಿಸಿದ ಪರಿಹಾರವನ್ನು ನೀಡಲು ಈ ನ್ಯಾಯಾಲಯದ ನೆರವಿಗೆ ಬರುವುದಿಲ್ಲವೆಂಬುದನ್ನು ಸ್ವತಃ ತೋರಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಬದಲಾಗಿ, ಈ ನ್ಯಾಯಾಲಯವು ಸಂಕೀರ್ಣ ಅರ್ಜಿ ಸಂ. 738/2003ರಲ್ಲಿ ಅರ್ಜಿದಾರ ವಕ್ಫ್‌ಗೆ ಸೇರಿದ ಇತರೆ ಸ್ವತ್ತುಗಳ ಸಂಬಂಧದಲ್ಲಿ ಸದರಿ ಅರ್ಜಿದಾರರಿಗೆ ಅದೇ ರೀತಿಯ ಪರಿಹಾರವನ್ನು ನೀಡಿರುತ್ತದೆ. ಈ ಅಭಿಪ್ರಾಯದ ಹಿನ್ನೆಲೆಯಲ್ಲಿ, ಅರ್ಜಿದಾರರ ಕೋರಿಕೆಯನ್ನು ನಿರಾಕರಿಸಲು ಸಮರ್ಥನೀಯ ಕಾರಣಗಳನ್ನು ನನಗೆ ಕಂಡುಬರುವುದಿಲ್ಲ. ತದನುಸಾರವಾಗಿ, ಈ ಮುಂದಿನದನ್ನು ಹೊರಡಿಸಲು ನಾನು ಮುಂದಾಗಿದ್ದೇನೆ :

## ಆಜ್ಞೆ

ಮಹಮದೀಯ ಕಾನೂನಿನಡಿಯಲ್ಲಿ ಈ ನ್ಯಾಯಾಲಯದಲ್ಲಿ ನಿಹಿತವಾಗಿರುವ ಅಧಿಕಾರಗಳನ್ನು ಕೋರಿ ಅರ್ಜಿದಾರ–ನ್ಯಾಸವು ಸಲ್ಲಿಸಿರುವ ಸಂಕೀರ್ಣ ಅರ್ಜಿಯನ್ನು ಅಂಗೀಕರಿಸಿರುತ್ತೇನೆ. ಅರ್ಜಿದಾರ–ನ್ಯಾಸಕ್ಕೆ ಎಲಿಕ್ಸೈರ್ ಎಂಟರ್ ಪ್ರೈಸಸ್ ಮತ್ತು ಹೋಟೆಲ್ಸ್ ಪ್ರೈ., ಲಿಮಿಟೆಡ್

ಹೆಸರಿನಲ್ಲಿ 14.11.2006ರಂದು ಆದ ಅಧಿಕೃತ ಜ್ಞಾಪನ ಮತ್ತು ಅದಕ್ಕೆ ಅನುಬಂಧಿಸಿದ ಕರಡು ಗುತ್ತಿಗೆ ಪತ್ರಗಳನ್ನು ರೂಪಿಸುವ ನಿಬಂಧನೆ ಮತ್ತು ಷರತ್ತುಗಳನ್ನು 31.07.2088ರವರೆಗೆ ಅರ್ಜಿ ಅನುಸೂಚಿತ ಸ್ವತ್ತಿನ ಈಗಿರುವ ಭೋಗ್ಯದ ಅವಧಿಯನ್ನು ಪರಿಷ್ಕರಿಸಲು ಮತ್ತು ವಿಸ್ತರಿಸಲು ಅನುಮತಿ ನೀಡಲಾಗಿದೆ ಮತ್ತು 14.11.2006ರಂದು ಅಧಿಕೃತ ಜ್ಞಾಪನಕ್ಕೆ ಅನುಬಂಧಿಸಲಾದ ಕರಡು ಭೋಗ್ಯ ಪತ್ರದ ನಿಬಂಧನೆಯಲ್ಲಿ ನೋಂದಾಯಿತ ಭೋಗ್ಯ ಪತ್ರವನ್ನು ಜಾರಿಗೆ ತರಲು ಮುತಾವಲಿಗೆ ಅನುಮತಿಯನ್ನು ನೀಡಲಾಗಿರುತ್ತದೆ.”.

6. ಮೇಲಿನ ಆದೇಶವನ್ನು ಅನುಸರಿಸಿ, ಕ್ರಮಕ್ಕೈಗೊಂಡ ಕಾರಣದಿಂದಾಗಿ, ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 151ನೇ ಪ್ರಕರಣದಡಿಯಲ್ಲಿ (ಇನ್ನು ಮುಂದೆ ಸಂಕ್ಷಿಪ್ತವಾಗಿ ಸಿ.ಪಿ.ಸಿ. ಎಂದು ಉಲ್ಲೇಖಿಸಲಾಗಿರುತ್ತದೆ) ಪ್ರಕರಣ ಸಂ. ಸಂಕೀರ್ಣ 324/2008ರಲ್ಲಿ ಈ ಅರ್ಜಿಗಳಲ್ಲಿ ಮೊದಲನೇ ಪ್ರತ್ಯರ್ಜಿದಾರರು ಸಲ್ಲಿಸಿರುತ್ತಾರೆ. ಇವನು ತನ್ನ ಸಹೋದರ ಮತ್ತು ಮತ್ತೊಬ್ಬನೊಂದಿಗೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 8ನೇ ನಿಯಮದ 1ನೇ ಆದೇಶದಡಿಯಲ್ಲಿ, ಸಂ. ಓ.ಎಸ್. 9503/2006ರಲ್ಲಿ, ಪ್ರಾತಿನಿಧಿಕ ಸ್ವರೂಪದ ದಾವೆಯನ್ನು, ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು ಇವರ ಮುಂದೆ ಮುತಾವಲಿಯ ವಿರುದ್ಧ ಸಲ್ಲಿಸಿದ್ದು ಈ ಅರ್ಜಿಗಳ ಎರಡನೇ ಅರ್ಜಿದಾರರು, 938/2006ರ ಸಂಕೀರ್ಣ ಅರ್ಜಿ ಸಲ್ಲಿಸುವ ಮೊದಲೇ ಇತರ ಆನುಷಂಗಿಕ ಪರಿಹಾರಗಳ ಜೊತೆಗೆ, ನ್ಯಾಸದ ಉಲ್ಲಂಘನೆಗೆ ಸಂಬಂಧಿಸಿದಂತೆ ಸದರಿ ಮುತಾವಲಿಯನ್ನು ವಜಾಗೊಳಿಸಬೇಕೆಂದು ಕೋರಿ ಅರ್ಜಿ ಸಲ್ಲಿಸಿರುತ್ತಾರೆಂದು ವಾದಿಸಿರುತ್ತಾರೆ. ಇವನು, ಈ ಮೇಲಿನ ನಿರ್ದಿಷ್ಟ ಸ್ವತ್ತಿನ ಸಂಬಂಧದಲ್ಲಿ, ಯಾವುದೇ ನವೀಕೃತ ಭೋಗ್ಯ ಪತ್ರವನ್ನು ನಮೂದಿಸುವುದರಿಂದ ಸದರಿ ಮುತಾವಲಿಯನ್ನು ನಿರ್ಬಂಧಿಸುವ ನಿರ್ಬಂಧಕಾಜ್ಞೆಯ ಮಧ್ಯಕಾಲೀನ ಪರಿಹಾರವನ್ನು ಕೋರಿರುತ್ತಾರೆಂದು ಇವರ

ವಾದವಾಗಿರುತ್ತದೆ. ಸಂಕೀರ್ಣ 938/2006ರಲ್ಲಿ ಹೊರಡಿಸಿದ 18.12.2007ನೇ ದಿನಾಂಕದ ಆದೇಶದ ಬಗ್ಗೆ ತಿಳಿದುಬಂದಾಗ, ಅರ್ಜಿಯು ಇತ್ಯರ್ಥದಲ್ಲಿದೆಯೆಂದು ಹೇಳಲಾಗುತ್ತಿತ್ತು. 2008ರ ಮಾರ್ಚ್‌ನಲ್ಲಿ ವಕ್ಫ್‌ನಡಿಯಲ್ಲಿನ ಫಲಾನುಭವಿಯಂತೆ ತನ್ನ ಸ್ಥಾನಬಲದಲ್ಲಿ 7.35 ಲಕ್ಷ ರೂ.ಗಳು, 2.10 ಲಕ್ಷ ರೂ.ಗಳು ಮತ್ತು 14.76 ಲಕ್ಷ ರೂ.ಗಳ ಮೂರು ಚೆಕ್ಕುಗಳನ್ನು ಸ್ವೀಕರಿಸಿದಾಗ ಮಾತ್ರ ಅಲ್ಲಿನ ಬೆಳವಣಿಗೆಗಳು ತಿಳಿದು ಬಂದಿವೆಯೆಂಬುದು ಅವನ ವಾದವಾಗಿರುತ್ತದೆ. ಸದರಿ ಪ್ರತ್ಯರ್ಜಿದಾರನ ಪ್ರಕಾರ, ಚೆಕ್ಕುಗಳನ್ನು ಅವುಗಳ ಮೂಲ ನಿಧಿಯಿಂದ ಅಥವಾ ಅವುಗಳನ್ನು ನೀಡಿದ ಲೆಕ್ಕಖಾತೆಯಿಂದ ಪಡೆದುಕೊಳ್ಳದೆ, ಮಾಮೂಲಿಯಾಗಿ ಆತನ ಕಚೇರಿ ಸಿಬ್ಬಂದಿಯು ನಗದೀಕರಿಸಿಕೊಂಡಿರುತ್ತದೆ. ಆದಾಗ್ಯೂ, ಪ್ರತ್ಯರ್ಜಿದಾರನು, ಸದರಿ ಮೊಬಲಗನ್ನು ಭೋಗ್ಯದ ನಗದೀಕರಣದ ರೂಪದಲ್ಲಿ ಪಡೆಯಲಾಗಿದೆಯೆಂದು ತಿಳಿದುಬಂದ ಕೂಡಲೇ, ಮುತಾವಲಿಗೆ ತಕ್ಷಣ ಹಣವನ್ನು ಮರುಪಾವತಿ ಮಾಡಿರುತ್ತಾನೆ.

7. ಮುತಾವಲಿಯು ಆರಂಭಿಸಿದ ನಡಾವಳಿಗಳಿಗೆ ಸಂಬಂಧಿಸಿದಂತೆ, ಫಲಾನುಭವಿಗಳಿಗೆ ಪ್ರತ್ಯೇಕವಾಗಿ ನೋಟೀಸುಗಳನ್ನು ನೀಡಿರುವುದಿಲ್ಲವೆಂದು ವಾದಿಸಲಾಗಿರುತ್ತದೆ. ಮುಂದುವರೆದು, ಮುತಾವಲಿಯು, ಆತನನ್ನು ತೆಗೆದುಹಾಕುವುದಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಪ್ರಾತಿನಿಧಿಕ ಸ್ವರೂಪದ ದಾವೆಯು ಇತ್ಯರ್ಥದಲ್ಲಿರುವುದನ್ನು ಉದ್ದೇಶಪೂರ್ವಕವಾಗಿ ನಿಗ್ರಹಿಸಿರುತ್ತಾನೆ. ಆದ್ದರಿಂದ, ವಾಸ್ತವಾಂಶಗಳನ್ನು ತಪ್ಪಾಗಿ ಪ್ರತಿನಿಧಿಸುವ ಮತ್ತು ರದ್ದುಪಡಿಸುವ ಮೂಲಕ ಆದೇಶವನ್ನು ಪಡೆಯಲಾಗಿರುತ್ತದೆ.

8. 1988ನೇ ವರ್ಷದ ಮೂಲ ಭೋಗ್ಯವು, 2038ರಲ್ಲಿ ಮುಕ್ತಾಯವಾಗುತ್ತದೆಂದು ವಾದಿಸಲಾಗಿದ್ದು, ಅಂಥ ಮುಕ್ತಾಯದ ದಿನದಂದು ಭೋಗ್ಯದಾರನು ನಿರ್ಮಿಸಿದ ಇಡೀ ನಿರ್ಮಿತ ಕಟ್ಟಡವು ವಕ್ಫ್‌ನ ಸ್ವತ್ತಾಗಲಿದ್ದು, ಇದರಿಂದ, ಶಾಶ್ವತವಾಗಿ ಕೈತುಂಬಾ ಬಾಡಿಗೆ ಪಡೆಯಬಹುದಾಗಿರುತ್ತದೆ. ಇದರಿಂದ ಬೆಂಗಳೂರು ನಗರದಲ್ಲಿನ ಪ್ರತಿಷ್ಠಿತ ಪ್ರದೇಶದಲ್ಲಿ 3 ಲಕ್ಷ ಚದರಡಿ ನಿರ್ಮಿತ

ಪ್ರದೇಶವು, ಎಷ್ಟೇ ಕಡಿಮೆ ಅಂದಾಜು ಮಾಡಿದಾಗ್ಯೂ, 2038ನೇ ವರ್ಷದಿಂದ ಖಂಡಿತವಾಗಿಯೂ ಗಣನೀಯ ಮೊತ್ತದ ಬಾಡಿಗೆಯನ್ನು ಪಡೆಯುವಂಥದ್ದೇ ಆಗಿರುತ್ತದೆ. ಹಾಗಾಗಿ, ವಿಸ್ತರಿತ ಅವಧಿಗಾಗಿ, ಭೋಗ್ಯದಾರನೊಂದಿಗೆ ಭೋಗ್ಯವನ್ನು ವಿಸ್ತರಿಸಿಕೊಳ್ಳುವುದಕ್ಕೆ ಮತ್ತು ಸೌಲಭ್ಯವನ್ನು ಹಂಚಿಕೊಳ್ಳುವುದಕ್ಕೆ ಯಾವುದೇ ಸಮರ್ಥನೆ ಇರುವುದಿಲ್ಲ. ಇದನ್ನು ನಿಸ್ಸಂಶಯವಾಗಿ, ವಿಶ್ವಾಸಕ್ಕೆ ತೆಗೆದುಕೊಳ್ಳದಂಥ ಫಲಾನುಭವಿಗಳ ವೆಚ್ಚದಲ್ಲಿ, ಮುತಾವಲಿಯು ಕಾನೂನುಬಾಹಿರವಾಗಿ ಸೌಲಭ್ಯ ಪಡೆಯುವುದಕ್ಕೆ ಸಂಬಂಧಿಸಿದಂತೆ ದುರ್ಭಾವನೆಯಿಂದ ಮಾಡಲಾಗಿರುತ್ತದೆ.

9. ಸದರಿ ಅರ್ಜಿಯನ್ನು, ಇಲ್ಲಿನ ಇಬ್ಬರೂ ಅರ್ಜಿದಾರರೂ ವಿರೋಧಿಸಿರುತ್ತಾರೆ. ಪ್ರತ್ಯರ್ಜಿದಾರ ಸಂ.1ರವರ ವಾಸ್ತವಿಕತೆಯನ್ನು ಇಲ್ಲಿ ಪ್ರಶ್ನಿಸಲಾಗಿರುತ್ತದೆ. ಇದರಿಂದ, ವಕ್ಫ್‌ನ ಪರವಾಗಿ, ಸದರಿ ಮುತಾವಲಿಯು ಸಲ್ಲಿಸಿದ ಮತ್ತೊಂದು ಅರ್ಜಿಯಲ್ಲಿ, ಸ್ವತಃ ಪಕ್ಷಕಾರರಾಗುವುದಕ್ಕೆ ಕೋರಿರುವಂಥ ಪ್ರತ್ಯರ್ಜಿದಾರರು, ಮತ್ತೊಂದು ಖಾಸಗಿ ನಿಯಮಿತ ಕಂಪನಿಗೆ, ಪ್ರಶ್ನಿತ ಸ್ವತ್ತು ಅಂದರೆ 135/1ಕ್ಕೆ ಹೊಂದಿಕೊಂಡ ಸ್ವತ್ತನ್ನು, ವಾಣಿಜ್ಯ ಉದ್ದೇಶಗಳಿಗಾಗಿ ಭೋಗ್ಯದ ಮೇಲೆ ನೀಡುವುದಕ್ಕೆ ಅನುಮತಿ ಕೋರಿರುವುದನ್ನು ಎತ್ತಿ ಹಿಡಿಯಲಾಗಿರುತ್ತದೆ. ತಮ್ಮ ವ್ಯವಹರಣೆಯು ನಿಷ್ಪ್ರಯೋಜಕವೆಂದು ಮನವರಿಕೆಯಾದಾಗ, ಆ ವ್ಯವಹರಣೆಗೆ ಸಮ್ಮತಿಸಿ, ಸೌಲಭ್ಯಗಳನ್ನು ಸ್ವೀಕರಿಸುವ ಮೂಲಕ ಫಲಾನುಭವಿಯಾಗಲು ಅರ್ಜಿಯನ್ನು ಹಿಂದಕ್ಕೆ ಪಡೆದುಕೊಂಡಿರುವುದು ಎದ್ದುಕಾಣುತ್ತದೆ. ಆದ್ದರಿಂದ, ಸದರಿ ಪ್ರತ್ಯರ್ಜಿದಾರನು, ಪ್ರಸ್ತುತ ಪ್ರಕರಣದಲ್ಲಿ ಸಮರ್ಥನೀಯವಲ್ಲದ ಆಕ್ಷೇಪಣೆಗಳನ್ನು ಪ್ರಸ್ತಾಪ ಮಾಡಿರುವುದು ಗುಪ್ತ ಮತ್ತು ದುರ್ಭಾವನೆಯ ಉದ್ದೇಶಗಳನ್ನು ಹೊಂದಿರುತ್ತದೆ.

10. ಮುಂದುವರೆದು, ಪ್ರತ್ಯರ್ಜಿದಾರ ಸಂ.1 ಇವನು, ಹಾಜಿ ಇಬ್ರಾಹಿಂ ಸೈಟ್ ವಕ್ಫ್, ಚೆನ್ನೈ ಎಂದು ಹೆಸರಾದ ವಕ್ಫ್‌ನ ಮುತಾವಲಿಯಾಗಿರುತ್ತಾನೆಂಬುದನ್ನು ಎತ್ತಿ ಹಿಡಿಯಲಾಗಿರುತ್ತದೆ. ಚೆನ್ನೈನಲ್ಲಿನ ವಕ್ಫ್‌ನ ಫಲಾನುಭವಿಗಳೆಂದು

ಹೇಳುತ್ತಿರುವಂಥ ಅರ್ಜಿಗಳಲ್ಲಿ ಒಳಗೊಂಡ ವಕ್ಫ್‌ನ ಮುತಾವಲಿಯ ಇಬ್ಬರು ಸಹೋದರರು, ಚೆನ್ನೈನಲ್ಲಿನ ವಕ್ಫ್‌ನ ಮುತಾವಲಿಯಂತೆ ಪ್ರತ್ಯರ್ಜಿದಾರ ಸಂ.1 ಇವರನ್ನು ವಜಾಗೊಳಿಸಬೇಕೆಂದು ಕೋರಿ, ಮೂಲ ಅಧಿಕಾರ ವ್ಯಾಪ್ತಿಯಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ಮುಂದೆ ಓ.ಎಸ್. 66/2005ರಲ್ಲಿ ಸಿವಿಲ್ ದಾವೆಯನ್ನು ಹೂಡಲಾಗಿರುತ್ತದೆಂಬುದನ್ನು ಎತ್ತಿ ಹಿಡಿಯಲಾಗಿರುತ್ತದೆ. ಹಾಗಾಗಿ, ಈ ಸಂದರ್ಭಗಳು, ವ್ಯವಹರಣೆಗಳ ಸಂಬಂಧದಲ್ಲಿ ಸಮರ್ಥನೀಯವಲ್ಲದೆ ಆಕ್ಷೇಪಣೆಗಳನ್ನು ಪ್ರಸ್ತಾಪಿಸಲು ಮತ್ತು ಬೆಂಗಳೂರು ವಕ್ಫ್‌ನ ಮುತಾವಲಿ ಎಂದರೆ ಈ ಅರ್ಜಿಗಳ ಎರಡನೇ ಅರ್ಜಿದಾರನನ್ನು ವಜಾಗೊಳಿಸಲು ಕೋರಿರುವಲ್ಲಿನ ನ್ಯಾಸದ ಉಲ್ಲಂಘನೆಯನ್ನು ಆಪಾದಿಸಲು ಪ್ರಚೋದಿಸಿರುತ್ತವೆ.

11. ಪ್ರಕರಣ ಸಂ. ಸಂಕೀರ್ಣ 938/2006ರಲ್ಲಿನ ಆದೇಶವನ್ನು ಅನುಸರಿಸಿ, ನವೀಕೃತ ಭೋಗ್ಯದಿಂದ ಬಂದಂಥ ಲಾಭಗಳ ಪರಿಗಣನೆಯಲ್ಲಿ ಸ್ವೀಕರಿಸಿದ ಚೆಕ್ಕುಗಳ ಹೇಳಲಾದ ನಿರಾಕರಣೆಯು ಸ್ಪಷ್ಟವಾಗಿ ಒಂದು ಪೂರ್ವಚಿಂತನೆಯಾಗಿರುತ್ತದೆ ಮತ್ತು ಹೇಳಲಾದ ಮರುಪಾವತಿಯು ಸಂಪೂರ್ಣವಾಗಿ ಉದ್ದೇಶಪೂರ್ವಕವಾಗಿದ್ದು, ಅನುಮತಿ ಮತ್ತು ನಿರಾಕರಣೆಯ ತಪ್ಪನ್ನು ತಪ್ಪಿಸಲು ಮಾಡಿರುವಂತದ್ದಾಗಿರುತ್ತದೆ.

12. ಅನುಮತಿಸುವ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ಸಿವಿಲ್ ನ್ಯಾಯಾಲಯವು ಯುಕ್ತವಾಗಿ ಉದ್ದೇಶಿಸಿದಂಥ ಭೋಗ್ಯಪತ್ರದ ವಿಸ್ತರಣೆ ಕೋರಿ ಅಳವಡಿಸಿಕೊಂಡ ಕಾರ್ಯವಿಧಾನದಲ್ಲಿ ಅಕ್ರಮವಿರುವುದಿಲ್ಲವೆಂಬುದನ್ನು ಒತ್ತಿ ಹೇಳಲಾಗಿರುತ್ತದೆ. ಯಾರೇ ಕರಾರುದಾರ ಪಕ್ಷಕಾರನಿಗೆ ಪ್ರದತ್ತವಾದ ಲಾಭದಲ್ಲಿ ಯಾವುದೇ ಮೋಸ ಅಥವಾ ಅನ್ಯಾಯ ಇಲ್ಲದಿದ್ದು, ಕಳೆದ ಹಲವಾರು ವರ್ಷಗಳಿಂದ ಫಲಾನುಭವಿಗಳನ್ನು ನಿರ್ಧರಿಸುವಲ್ಲಿ, ಯಾರೊಬ್ಬರೂ ಯಾವುದೇ ಆಕ್ಷೇಪಗಳನ್ನು ಪ್ರಸ್ತಾಪಿಸದಿರುವುದು, ಪ್ರತ್ಯರ್ಜಿದಾರ ಸಂ.1ರ ಫಿರ್ಯಾದು ಸ್ಪಷ್ಟವಾಗಿ ದುರ್ಭಾವನಾ ಪೂರ್ವಕವಾದದ್ದಾಗಿದ್ದು, ಇದರಲ್ಲಿ ಯಾವುದೇ ಹುರುಳಿರುವುದಿಲ್ಲವೆಂಬುದನ್ನು ನಿರೂಪಿಸುತ್ತದೆ.

13. ಸಿವಿಲ್ ನ್ಯಾಯಾಲಯವು, ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸಿದ ತರುವಾಯ ಮತ್ತು ಸಂಬಂಧಪಟ್ಟ ವಾದಗಳನ್ನು ಪರಿಗಣಿಸಿದ ಮೇಲೆ ರಿಟ್ ಅರ್ಜಿ 18383/2011ರಲ್ಲಿನ ಅರ್ಜಿದಾರ ಮುತಾವಲಿಯು, ಮುತಾವಲಿದಾರಿಕೆಯಿಂದ ಸದರಿ ಅರ್ಜಿದಾರರ ವಜಾವನ್ನು ಕೋರಿರುವ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರ ಕಡತದ ಮೇಲಿನ ಓ.ಎಸ್. 9503/2006ರಲ್ಲಿ ಪ್ರತ್ಯರ್ಜಿದಾರ ಸಂ.1 ಸಲ್ಲಿಸಿದ ದಾವೆಯಲ್ಲಿ ಪ್ರತಿವಾದಿಗಳಾಗಿರುತ್ತಾರೆ. ಮತ್ತು ಸದರಿ ಅರ್ಜಿದಾರರು, ಸಂಕೀರ್ಣ 938/2006ರಲ್ಲಿನ ಕಾರ್ಯವಿಧಾನಗಳ ಬಗ್ಗೆ ತೀರ್ಮಾನಕ್ಕೆ ಬರುವ ಮೊದಲೇ ಅದರಲ್ಲಿ ಹಾಜರಾಗಿರುತ್ತಾರೆ. ಆದರೆ ಸಂಕೀರ್ಣ ಸಂ. 938/2006ರಲ್ಲಿ ಪ್ರಸ್ತಾಪಿಸಿದಂತೆ ಭೋಗ್ಯದ ನವೀಕರಣವನ್ನು ನಿರ್ಬಂಧಿಸಲು, ಸದರಿ ದಾವೆಯಲ್ಲಿ ವಾದಕಾಲೀನ ಅರ್ಜಿಯನ್ನು ಸಹ ಸಲ್ಲಿಸಿದಂಥ ಫಲಾನುಭವಿಗಳಲ್ಲಿ ಒಬ್ಬರೂ ಸದರಿ ದಾವೆಯಲ್ಲಿ ನ್ಯಾಯಾಲಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ. ಆದ್ದರಿಂದ, ವಾಸ್ತವಾಂಶಗಳನ್ನು ಮರೆಮಾಚಿದೆಯೆಂದು ಮೇಲ್ನೋಟಕ್ಕೆ ಅಭಿಪ್ರಾಯಪಟ್ಟಿರುತ್ತದೆ. ತದನುಸಾರವಾಗಿ ನ್ಯಾಯಾಲಯವು, ಸಂಕೀರ್ಣ 324/2008ರಲ್ಲಿ ಅರ್ಜಿಯನ್ನು ಸಲ್ಲಿಸುವಲ್ಲಿನ ವಿಳಂಬವನ್ನು ಮನ್ನಾ ಮಾಡಿರುತ್ತದೆ. ಎರಡನೆಯದಾಗಿ, ಮುತಾವಲಿಗೆ ತಿಳಿದಂತೆ 56 ಜನ ಫಲಾನುಭವಿಗಳಿದ್ದು, ವಕ್ಫ್ ಸ್ವತ್ತಿನೊಂದಿಗೆ ವ್ಯವಹರಿಸಲು, ಅವರಲ್ಲಿ ಪ್ರತಿಯೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿರುತ್ತದೆಂಬುದು ತಿಳಿದುಬಂದಿರುತ್ತದೆ. ಪ್ರತ್ಯರ್ಜಿದಾರನು ಚೆನ್ನೈನ ನಿವಾಸಿಯಾಗಿರುತ್ತಾನೆ. ಮುತಾವಲಿಯ ಅರ್ಜಿಯು, ಸ್ಥಳೀಯ ಕನ್ನಡ ದಿನಪತ್ರಿಕೆಯಲ್ಲಿ ಅಧಿಸೂಚಿತವಾಗಿದ್ದು, ಈ ಬಗೆಯ ವಿಷಯಗಳ ಬಗೆಗಿನ ಜ್ಞಾನವನ್ನು ಬೆಂಗಳೂರಿನಲ್ಲಿಯೇ ವಾಸಿಸುವ ಉರ್ದು ಭಾಷಿಕರಿಂದಲೇ ನಿರೀಕ್ಷಿಸುವುದು ಕಷ್ಟಸಾಧ್ಯವಾಗಿರುವಾಗ, ಇತರೆ ನಗರಗಳ ನಿವಾಸಿಗಳಿಂದ ನಿರೀಕ್ಷಿಸುವುದು ಮತ್ತೂ ಕಷ್ಟಸಾಧ್ಯವಾಗಿರುತ್ತದೆ. ತದನುಸಾರವಾಗಿ, ಸಿವಿಲ್ ನ್ಯಾಯಾಲಯವು ಮತ್ತೊಮ್ಮೆ ಪ್ರಶ್ನಿಸಿರುವ ಮತ್ತು ಪ್ರತ್ಯರ್ಜಿದಾರ ಸಂ.1ನ್ನು ಸುನಾವಣೆ ಮಾಡಿರುವ ಸಂಕೀರ್ಣ 938/2006ರಲ್ಲಿ ಹೊರಡಿಸಿದ 18.12.2007ನೇ

ದಿನಾಂಕದ ಹಿಂದಿನ ಆದೇಶದಲ್ಲಿ ಯಾವುದೇ ಪೂರ್ವಾಗ್ರಹ ಕಾರಣವಾಗಿರುವುದಿಲ್ಲವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದರಿಂದಾಗಿ ಪ್ರಸ್ತುತ ರಿಟ್ ಅರ್ಜಿಯನ್ನು ಪ್ರಶ್ನಿಲಾಗಿರುತ್ತದೆ.

14. ಈ ಅರ್ಜಿಗಳಲ್ಲಿನ ಮೊದಲನೇ ಅರ್ಜಿಯ ಅರ್ಜಿದಾರನ ಪರ ವಕೀಲನ ಪರವಾಗಿ ಹಾಜರಾದ ಮಾನ್ಯ ಹಿರಿಯ ವಕೀಲರಾದ ಶ್ರೀ ಡಿ.ಎಲ್.ಎನ್. ರಾವ್‌ರವರು ಪ್ರಕರಣದ ವಾಸ್ತವಾಂಶಗಳನ್ನು ಈ ನ್ಯಾಯಾಲಯದಲ್ಲಿ ನಿರ್ಣಯಿಸುವಾಗ, ಸಿವಿಲ್ ನ್ಯಾಯಾಲಯವು, ಪ್ರತ್ಯರ್ಜಿದಾರ ಸಂ.1 ಇವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣವನ್ನು ಆಧರಿಸಿ, ಅಂತಿಮತೆಯಲ್ಲಿರುವ ಆದೇಶವನ್ನು ಮತ್ತೊಮ್ಮೆ ಪರಿಗಣಿಸಲು ಅನುಮತಿ ನೀಡಿರುವುದು ಸಂಪೂರ್ಣವಾಗಿ ಅಧಿಕಾರ ವ್ಯಾಪ್ತಿಯನ್ನು ಮೀರಿರುವುದಾಗಿರುತ್ತದೆಂದು ವಾದಿಸಿರುತ್ತಾರೆ. ಅರ್ಜಿಯು, ಪುನರವಲೋಕನ ಅರ್ಜಿಯ ಸ್ವರೂಪದಲ್ಲಿಯಾಗಲೀ ಅಥವಾ ಅಪೀಲಿನ ಸ್ವರೂಪದಲ್ಲಿಯಾಗಲೀ ಇರುವುದಿಲ್ಲ.

15. ಉತ್ತರಾಧಿಕಾರಿಗಳು ಬರುವ ಅಂತರ ಕಾಲದಲ್ಲಿ ಮಧ್ಯೆ ಪ್ರವೇಶಿಸಬಹುದಾದಂಥ ಮೂರನೇ ಪಕ್ಷಕಾರರ ಹಕ್ಕುಗಳಿಗೆ ಯುಕ್ತ ಗಮನ ನೀಡುವುದರೊಂದಿಗೆ ಅಧೀನ ನ್ಯಾಯಾಲಯವು ಮುಂದುವರಿಯಲೇಬೇಕಾಗಿದ್ದು, ಮಂಜೂರಾತಿ ನೀಡಲಾಗಿರುವಂಥ ಹಲವಾರು ವ್ಯವಹರಣೆಗಳನ್ನು ಮಾಡಿಕೊಳ್ಳಲು ಮುತಾವಲಿಯನ್ನು ಸಮರ್ಥಗೊಳಿಸಲು ನ್ಯಾಯಾಲಯದ ಅನುಮತಿ ಕೋರಿರುವ ಅರ್ಜಿಯ ಮೇಲೆ 18.12.2007ನೇ ದಿನಾಂಕದ ಆದೇಶವನ್ನು ಹೊರಡಿಸಲಾಗಿರುತ್ತದೆ. ಹಳೇ ಪದ್ಧತಿಯನ್ನು ಸ್ಥಾಪಿಸಲು ಅಳವಡಿಸಿಕೊಳ್ಳಬೇಕಾದ ಯಾವುದೇ ಮಾದರಿ ಅಥವಾ ರೀತಿಯ ಯಾವುದೇ ಉಲ್ಲೇಖವೂ ಇರುವುದಿಲ್ಲ. ಹೆಚ್ಚಿನ ತೊಂದರೆಗೆ ಒಳಗಾದಂಥ ಪಕ್ಷಕಾರನು, ಹೆಚ್ಚಿನ ಮೊತ್ತದ ಹಣವನ್ನು ಹೂಡಿರುವಂಥ ಭೋಗ್ಯದಾರನಾಗಿದ್ದು ಇದು ಅವನ ಸ್ಥಿತಿಯನ್ನು ಗಂಭೀರ ಸ್ವರೂಪದಲ್ಲಿ ಬದಲಾಯಿಸುತ್ತದೆ.

16. ಭೋಗ್ಯದ ನವೀಕೃತ ನಿಬಂಧನೆಗಳ ಬಲದಿಂದ ವಕ್ಫ್‌ನ ಯಾವುದೇ ಅನಾನುಕೂಲಕ್ಕೆ ಅವು ಹೇಗೆ ಕಾರಣವಾದವೆಂಬುದಕ್ಕೆ ಯಾವುದೇ ವಿವರಗಳು ಇಲ್ಲದಿರುವಲ್ಲಿ, ವಕ್ಫ್ ಮತ್ತು ಅದರಡಿಯಲ್ಲಿನ ಫಲಾನುಭವಿಗಳು ಪಡೆಯಬೇಕಾದ ಅನುಕೂಲಗಳನ್ನು ಉದ್ದೇಶಿಸಿ ಪರಿಗಣಿತ ಆದೇಶವನ್ನು ಹೊರಡಿಸಿದ್ದ ನ್ಯಾಯಾಲಯದ ಎದುರು, 18.12.2007ರಂದಿನ ಆದೇಶವನ್ನು ಹಿಂಪಡೆಯುವಲ್ಲಿ ಅಧೀನ ನ್ಯಾಯಾಲಯವು ಹೇಳಿರುವ ಕಾರಣಗಳು ನ್ಯಾಯವಿಫಲತೆಗೆ ಕಾರಣವಾಗಿವೆ.

17. ಅರ್ಜಿಯನ್ನು ಸಲ್ಲಿಸುವಲ್ಲಿ ಪ್ರತ್ಯರ್ಜಿದಾರ ಸಂ.1 ಅವನು, ಭೋಗ್ಯಪತ್ರದ ನವೀಕರಣಕ್ಕೆ ಕರಡನ್ನು ಸಿದ್ಧಪಡಿಸುವ ಮೊದಲಿನ ವ್ಯವಹರಣೆಗಳ ಸಂಬಂಧದಲ್ಲಿನ ಸಭೆಗಳಲ್ಲಿ ಭಾಗವಹಿಸಿದವನಾಗಿದ್ದುದರಿಂದ ಈ ಬಗೆಗೆ ಸಂಪೂರ್ಣ ತಿಳಿವಳಿಕೆ ಹೊಂದಿದ್ದನೆಂಬ ಸಂದರ್ಭಗಳಿಂದ ಅವನ ದುರ್ಭಾವನೆಗಳು, ಮತ್ತಷ್ಟು ವ್ಯಕ್ತವಾಗುತ್ತವೆಂದು ಪ್ರಸ್ತಾಪಿಸಲಾಗಿರುತ್ತದೆ. ನ್ಯಾಯಾಲಯದ ಅನುಮತಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸುತ್ತಿರುವಾಗ ಕೂಡ ಅರ್ಜಿಯನ್ನು ಸಲ್ಲಿಸುವುದಕ್ಕೆ ತುಂಬಾ ಮೊದಲೇ ಸಲ್ಲಿಸಿದ ದಾವೆಯಲ್ಲಿನ ವಾದಪತ್ರಗಳಲ್ಲಿ ಕೂಡ ಇದನ್ನೇ ಹೇಳಲಾಗಿರುತ್ತದೆ.

18. ಹಾಗಾಗಿ, ಪ್ರಶ್ನಿತ ಆದೇಶವನ್ನು ತಳ್ಳಿ ಹಾಕಬೇಕೆಂದು ವಾದಿಸಲಾಗಿರುತ್ತದೆ. ಸದರಿ ವಾದಗಳೇ, ಈ ಅರ್ಜಿಗಳ ಎರಡನೇ ಅರ್ಜಿದಾರನಿಂದಲೂ ಪ್ರತಿಧ್ವನಿಸಿರುತ್ತವೆ.

19. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತ್ಯರ್ಜಿದಾರ ಸಂ.1ರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಪ್ರಶ್ನಿತ ಆದೇಶಗಳನ್ನು ಸಮರ್ಥಿಸಲು ಕೋರಿರುತ್ತಾರೆ. ಮಾನ್ಯ ವಕೀಲರು, ಇಲ್ಲಿ ಪ್ರತ್ಯರ್ಜಿದಾರ ಸಂ.1 ಮುತಾವಲಿಯು ಆತನ ವಿರುದ್ಧ ಸಲ್ಲಿಸಿರುವ ಇತ್ಯರ್ಥದಲ್ಲಿರುವ ದಾವೆಯನ್ನು ಆತನು ರೂಪಿಸಿ, ಅದನ್ನು ಹತ್ತಿಕ್ಕಿರುವ ರೀತಿಯನ್ನು ಪ್ರಸ್ತಾಪಿಸಿರುತ್ತಾರೆ ಮತ್ತು ನ್ಯಾಯಾಲಯದ ಮುಂದೆ ಮೋಸ ಮಾಡುವಂಥ ಯಾವುದೇ ದಾರಿ ಇರದಿರುವಂಥ, ನ್ಯಾಯವಾದಿಯಿಂದ

ಅರ್ಜಿಯ ಮೇಲೆ ಆದೇಶವನ್ನು ಪಡೆಯಲು ಮುಂದುವರೆದು, ನ್ಯಾಯಾಲಯವು ತನ್ನ ಘನತೆಯನ್ನು ಸಂರಕ್ಷಿಸಿಕೊಳ್ಳಲು ಮತ್ತು ನಿರ್ವಹಿಸಿಕೊಳ್ಳಲು ಮತ್ತು ಅದರ ದಾರಿಯಲ್ಲಿ ಅನುಸರಿಸಬಹುದಾದಂಥ ಯಾವುದೇ ಅನಾನುಕೂಲ ಅಥವಾ ತೊಂದರೆಗಳಲ್ಲಿ ಏನೇ ಇದ್ದರೂ, ಅಂಥ ಅನಿಷ್ಠ ಪರಿಹಾರವನನ್ನುಸರಿಸಿ ಎಲ್ಲಾ ಕ್ರಮಗಳ ಗೋಜಲುಗಳು ಮತ್ತು ಗೊಂದಲಗಳನ್ನು ನಿವಾರಿಸಲು ತನ್ನಲ್ಲಿರುವ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಬಹುದೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆಂದು ವಾದಿಸಿರುತ್ತಾರೆ. ಈ ಸಂಬಂಧದಲ್ಲಿ, ***ಕೆ.ಡಿ.ಶರ್ಮ –ವಿರುದ್ಧ– ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್*** [2], ಮತ್ತು ***ಇಂಡಿಯನ್ ಬ್ಯಾಂಕ್ –ವಿರುದ್ಧ– ಸತ್ಯಂ ಫೈಬರ್ಸ್ ಇಂಡಿಯಾ ಲಿಮಿಟೆಡ್*** [3], ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉದಾಹರಿಸಲಾಗಿರುತ್ತದೆ.

20. ಮೇಲಿನ ವಾಸ್ತವಾಂಶಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಅಧೀನ ನ್ಯಾಯಾಲಯವು, ಪ್ರ.ಸಂ. ಸಂಕೀರ್ಣ 938/2006ರಲ್ಲಿ ಹೊರಡಿಸಿದ 18.12.2007ರ ದಿನಾಂಕದ ಆದೇಶವನ್ನು ಹಿಂದಕ್ಕೆ ಪಡೆದು, ಸದರಿ ಅರ್ಜಿಯನ್ನು ಮರುಪರಿಶೀಲನೆಗೆ ಪುನಃ ಕಡತಕ್ಕೆ ಸೇರಿಸಿರುವುದು ಸಮರ್ಥನೀಯವೇ ಎಂಬ ಪ್ರಶ್ನೆಯನ್ನು ಪರಿಗಣಿಸಬೇಕಾಗಿದೆ.

21. ಮೊದಲನೆಯದಾಗಿ, ನ್ಯಾಯಾಲಯದ ಅನುಮತಿ ಕೋರಿ, ಪ್ರತ್ಯರ್ಜಿದಾರ ಸಂ. 1 ಸಲ್ಲಿಸಿದ ಅರ್ಜಿಯು ಭಾರತೀಯ ನ್ಯಾಸಗಳ ಅಧಿನಿಯಮ, 1882 (ಇನ್ನು ಮುಂದೆ ಸಂಕ್ಷಿಪ್ತವಾಗಿ 1882ರ ಅಧಿನಿಯಮವೆಂದು ಕರೆಯಲಾಗಿದೆ)ರ 36ನೇ ಪ್ರಕರಣವನ್ನು ಆಧರಿಸಿರುತ್ತದೆಂಬುದನ್ನು ಮತ್ತು ಅರ್ಜಿಯನ್ನು ಅಂಗೀಕರಿಸುವಲ್ಲಿ ಸಿವಿಲ್ ನ್ಯಾಯಾಲಯವು, ಸದರಿ ಪ್ರಕರಣದ ಉಲ್ಲೇಖದೊಂದಿಗೆ ಮತ್ತು ***ಯೂಸಫ್ ನಸ್ವೀ –ವಿರುದ್ಧ– ಶ್ರೀ ದೇವಸುಂದರ್*** [4], ಪ್ರಕರಣದಲ್ಲಿನ ಈ ನ್ಯಾಯಾಲಯದ

2. (2008) 12 ಎಸ್‌ಸಿಸಿ 481

3. (1996) 5 ಎಸ್‌ಸಿಸಿ 550

4. 1975 (1) ಕೆಎಆರ್.ಎಲ್.ಜೆ 58

ತೀರ್ಪಿನ ಆಧಾರವನ್ನು ಪಡೆದುಕೊಳ್ಳಲು ಒತ್ತಾಯಪಡಿಸಿರುವುದನ್ನು ಗಮನಿಸಲಾಗಿರುತ್ತದೆ. ಇದನ್ನು ಬಿಡಿಸಿ ಹೇಳಲಾಗುವುದಿಲ್ಲ. ಉದಾಹರಿಸಿರುವ ಈ ತೀರ್ಪು, ಭಾರತೀಯ ನ್ಯಾಸ ಅಧಿನಿಯಮದ ಉಪಬಂಧಗಳು ಅನ್ವಯವಾಗುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ವಿವರಿಸುತ್ತವೆ. ಅಧಿನಿಯಮದ 1ನೇ ಪ್ರಕರಣವು, ವಕ್ಫ್‌ಗೆ ಸಂಬಂಧಿಸಿದ ಮಹಮಡನ್ ಕಾನೂನಿನ ನಿಯಮಗಳಿಗೆ, ಅಥವಾ ಖಾಸಗಿ ಧಾರ್ಮಿಕ ಅಥವಾ ಧರ್ಮಾದಾಯ ದತ್ತಿಗಳಿಗೆ ಸಂಬಂಧಿಸಿದ ಅಧಿನಿಯಮದ ಅನುಷ್ಠಾನವನ್ನು ಸ್ಪಷ್ಟವಾಗಿ ಹೊರತುಪಡಿಸುತ್ತದೆ.

1882ನೇ ಅಧಿನಿಯಮದ 1ನೇ ಪ್ರಕರಣವು ಸಿದ್ಧ ಉಲ್ಲೇಖಕ್ಕೆ ಸಂಬಂಧಿಸಿದಂತೆ ಯಥಾವತ್ತಾಗಿ ನಿರೂಪಿಸುತ್ತದೆ.

> ''1. **ಚಿಕ್ಕ ಹೆಸರು ಮತ್ತು ಪ್ರಾರಂಭ**.– ಈ ಅಧಿನಿಯಮವನ್ನು ಭಾರತೀಯ ನ್ಯಾಸಗಳ ಅಧಿನಿಯಮ, 1882 ಎಂದು ಕರೆಯತಕ್ಕದ್ದು ಮತ್ತು ಇದು, 1882ರ ಮಾರ್ಚ್ ತಿಂಗಳ ಮೊದಲ ದಿನದಿಂದ ಜಾರಿಗೆ ಬರತಕ್ಕದ್ದು.
>
> **ಸ್ಥಳೀಯ ವ್ಯಾಪ್ತಿ**.– ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ; ಆದರೆ ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿನ ಅಧಿಸೂಚನೆಯ ಮೂಲಕ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಅಥವಾ ಯಾವುದೇ ಭಾಗಕ್ಕೆ ವ್ಯಾಪ್ತಗೊಳಿಸಬಹುದಾಗಿರುತ್ತದೆ.
>
> **ಉಳಿಸುವಿಕೆಗಳು**.– ಇಲ್ಲಿ ಒಳಗೊಂಡ ಯಾವುದೂ, ವಕ್ಫ್‌ಗೆ ಸಂಬಂಧಿಸಿದ ಮಹಮದೀಯ ಕಾನೂನಿನ

ನಿಯಮಗಳಿಗೆ ಅಥವಾ ರೂಢಿಜನ್ಯ ಅಥವಾ ಮತಸಂಬಂಧಿ ಕಾನೂನು ನಿರ್ದಿಷ್ಟಪಡಿಸಿದಂಥ ಅವಿಭಕ್ತ ಕುಟುಂಬದ ಸದಸ್ಯರ ಪರಸ್ಪರ ಸಂಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ ಅಥವಾ ಸರ್ಕಾರೀ ಅಥವಾ ಖಾಸಗಿ, ಧಾರ್ಮಿಕ ಅಥವಾ ಧರ್ಮಾರ್ಥ ದತ್ತಿಗಳಿಗೆ ಅಥವಾ ಬಂಧನಕಾರರ ನಡುವಿನ ಯುದ್ಧದಲ್ಲಿ ತೆಗೆದುಕೊಂಡ ಬಹುಮಾನಗಳನ್ನು ಹಂಚಿಕೊಡಲು ವಿತರಕರಿಗೆ ಅನ್ವಯವಾಗತಕ್ಕದ್ದಲ್ಲ; ಈ ಅಧಿನಿಯಮದ ಎರಡನೇ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ಸದರಿ ದಿನಕ್ಕೆ ಮೊದಲು ಸೃಜಿಸಲಾದ ನ್ಯಾಸಕ್ಕೆ ಅನ್ವಯವಾಗತಕ್ಕದ್ದಲ್ಲ.;;

22. ಖಾಸಗಿ ವರ್ಕ್ಫ್‌ನ ಸಂಬಂಧದಲ್ಲಿ, ಸಿವಿಲ್ ನ್ಯಾಯಾಲಯವು ಚಲಾಯಿಸಿದ ಅಧಿಕಾರದಲ್ಲಿ ಪ್ರಾಪ್ತವಾದ ಅಧಿಕಾರವು ಈ ಹಿಂದೆ ಹೇಳಿದ ***ಮೊಹಮದ್ ಇಸ್ಮಾಯಿಲ್‌ನ*** ಪ್ರಕರಣದಲ್ಲಿ ಪ್ರಿವಿ ಕೌನ್ಸಿಲ್‌ನ ತೀರ್ಪಿನಲ್ಲಿ ಕಾಣಬಹುದಾಗಿರುತ್ತದೆ. ಸದರಿ ಪ್ರಕರಣವು, ಧಾರ್ಮಿಕ ಉದ್ದೇಶಗಳನ್ನು ಕುರಿತಾದ ಸಾರ್ವಜನಿಕ ನ್ಯಾಸಕ್ಕೆ ಸಂಬಂಧಿಸಿದ್ದಾಗ್ಯೂ, ತೀರ್ಪಿನ ಸಮಯದಲ್ಲಿ, ಮಹಮದೀಯ ಕಾನೂನಿನಡಿಯಲ್ಲಿ ಸಿವಿಲ್ ನ್ಯಾಯಾಲಯವು, ಈ ವಿಷಯದಲ್ಲಿ ಯಾವುದೇ ವಿವೇಚನೆಯನ್ನು ಹೊಂದಿರುವುದಿಲ್ಲವೆಂಬ ಮತ್ತು ನ್ಯಾಸಧಾರಿಗಳು ಅಥವಾ ಮುತಾವಲಿಗಳ ನೇಮಕಾತಿ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಎಲ್ಲ ವಿಷಯಗಳಲ್ಲಿನ ಸಂಸ್ಥಾಪಕರು ವಿಧಿಸಿದ ನಿಯಮಕ್ಕೆ ಪರಿಣಾಮಕ್ಕೆ ತರಲೇಬೇಕಾಗುತ್ತದೆಂಬ ವಾದದೊಂದಿಗೆ ವ್ಯವಹರಿಸುವಲ್ಲಿ, ಅಪೀಲುದಾರರ ಪರವಾಗಿ ಮಂಡಿಸಿದ ಅತಿಯೆನಿಸುವ ಪ್ರಸ್ತಾವವು ಮನವರಿಕೆ ಮಾಡಿಕೊಡುವಂತಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ನಿರ್ದಿಷ್ಟ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸೃಜಿಸಿದ ಖಾಸಗಿ ನ್ಯಾಸದ ಸಂದರ್ಭದಲ್ಲಿ ಬ್ರಿಟಿಷ್ ಭಾರತೀಯ ವ್ಯವಸ್ಥೆಯಲ್ಲಿ, ಸಿವಿಲ್ ನ್ಯಾಯಾಲಯವು ನಿರ್ವಹಿಸುತ್ತಿರುವ ಪಾತ್ರವನ್ನು ನಿರ್ವಹಿಸುತ್ತಿದ್ದ ಕಾಜ್ಹಿಯು, ಸಂಸ್ಥಾಪಕ ...... ಮುಂತಾದವರು ವ್ಯಕ್ತಪಡಿಸಿದ ಆಶೋತ್ತರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅನುಷ್ಠಾನಗೊಳಿಸಿ ನ್ಯಾಸವನ್ನು

ನಿರ್ವಹಿಸುತ್ತಿರುತ್ತಾನೆ. ಇದು, ಭಾರತದಲ್ಲಿನ ಸಿವಿಲ್ ನ್ಯಾಯಾಲಯಗಳು, ಪ್ರಸ್ತುತ ಪ್ರಕರಣದಲ್ಲಿರುವಂಥ ಸಂದರ್ಭದಲ್ಲಿನ ಅಧಿಕಾರವನ್ನು ಚಲಾಯಿಸುವಲ್ಲಿ ಆಧರಿಸಿರುವಂಥ ಸೂಕ್ತಿಯಾಗಿರುತ್ತದೆ. ಆದ್ದರಿಂದ, ಮೇಲಿನ ಅರ್ಜಿಯನ್ನು ವ್ಯವಹರಿಸುವಲ್ಲಿ, ನಿಗದಿಪಡಿಸಿದ ಯಾವುದೇ ವಿಶೇಷ ಕಾರ್ಯವಿಧಾನವು ಇಲ್ಲದಿರುವಲ್ಲಿ, ಸಿವಿಲ್ ನ್ಯಾಯಾಲಯವು, ತನ್ನ ಅಧಿಕಾರ ವ್ಯಾಪ್ತಿಯೊಳಗೆ ಕಂಡುಬಂದಂಥ, ಕ್ಲೇಮನ್ನು ಕುರಿತ ಅಥವಾ ಪರಿಹಾರವನ್ನು ಕೋರಿದ ಪ್ರತೀ ಪ್ರಕರಣಗಳ ನೀಡಲಾದ ವಾಸ್ತವಾಂಶಗಳು ಮತ್ತು ಸಂದರ್ಭಗಳು ಅನ್ವಯವಾಗುವ ಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಅಂಥ ಉಪಬಂಧಗಳನ್ನು ಅನ್ವಯಿಸಿಕೊಳ್ಳುವ ಅಧಿಕಾರದ ಮಿತಿಯೊಳಗಿರುತ್ತದೆ.

23. ಮುಂದುವರೆದು, ಮುತಾವಲಿಯು ಸಲ್ಲಿಸಿದ ಅರ್ಜಿಯಲ್ಲಿ ಯಾರೇ ಪ್ರತ್ಯರ್ಜಿದಾರನ ಹೆಸರನ್ನು ನಮೂದಿಸಿರುವುದಿಲ್ಲವೆಂಬುದನ್ನು ಗಮನಿಸಲಾಗಿರುತ್ತದೆ. ಇವನು ಪ್ರತ್ಯರ್ಜಿದಾರರಂತೆ ಯಾರನ್ನೂ ಸೂಚಿಸಿರುವುದಿಲ್ಲ. ವಕ್ಫ್‌ನಲ್ಲಿ 56 ಫಲಾನುಭವಿಗಳನ್ನು ಗುರುತಿಸಲಾಗಿದೆಯೆಂಬುದು ಒಪ್ಪಿಕೊಂಡ ವಿಚಾರವಾಗಿರುತ್ತದೆ. ಮುತಾವಲಿಯ ಜೊತೆಗೆ ಆತನ ಅರ್ಜಿಯನ್ನು ಬೆಂಬಲಿಸುವುದನ್ನು ಅವರು ತೋರಿಸದ ಹೊರತು, ಪ್ರತ್ಯರ್ಜಿದಾರರೆಂದೇ ಅವರನ್ನು ಕರೆಯಲಾಗುತ್ತದೆ. ವಾದಗಳ ಸಂದರ್ಭದಲ್ಲಿ ಅನೇಕಬಾರಿ, ಸದರಿ ಪ್ರತ್ಯರ್ಜಿದಾರರಿಗೆ ಪ್ರತ್ಯೇಕವಾಗಿ ನೋಟೀಸುಗಳನ್ನು ನೀಡುವ ಅಗತ್ಯವಿರುವುದಿಲ್ಲವೆಂದು ಹೇಳಲಾಗಿರುತ್ತದೆ. ಇದನ್ನು ಯಾವುದೇ ಹೆಸರಾಂತ ಕಾನೂನು ತತ್ವದ ಉಲ್ಲೇಖದೊಂದಿಗೆ ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಆದ್ದರಿಂದ, ಸಿವಿಲ್ ನ್ಯಾಯಾಲಯವು, ತಿಳಿದಿರುವ ಫಲಾನುಭವಿಗಳಿಗೆ ಪ್ರತ್ಯೇಕ ನೋಟೀಸುಗಳನ್ನು ನೀಡಲು ಅಗತ್ಯಪಡಿಸಿದೆ. ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ನೀಡಿದ ಕಾರ್ಯವಿಧಾನದ ನೋಟೀಸು, ಅಂಥ ಪ್ರತ್ಯೇಕ ನೋಟೀಸುಗಳಿಗೆ ಹೆಚ್ಚುವರಿಯಾಗಿರುತ್ತವೆ. ನೋಟೀಸನ್ನು, ಫಲಾನುಭವಿಗಳಿಗೆ ಸಂಬಂಧಿಸಿದ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಉರ್ದು ಪತ್ರಿಕೆಗಳನ್ನು ಒಳಗೊಂಡಂತೆ, ವ್ಯಾಪಕ ಪ್ರಸಾರವಿರುವಂಥ ವೃತ್ತಪತ್ರಿಕೆಗಳಲ್ಲಿ ಹೊರಡಿಸಲಾಗಿರುತ್ತದೆ. ಬಹುತೇಕ

ಫಲಾನುಭವಿಗಳು, ತಮ್ಮ ಹಿತಾಸಕ್ತಿಯನ್ನು ಸಂರಕ್ಷಿಸಿಕೊಳ್ಳುವ ಮತ್ತು ಈ ವಿಷಯದ ಬಗ್ಗೆ ಮಾತನಾಡಬಹುದಾದ ಹಕ್ಕನ್ನು ಹೊಂದಿರಬಹುದಾದ ಬಗ್ಗೆ ಜಾಗೃತಿ ಹೊಂದಿರದಿರುವ ಸಾಮಾನ್ಯ ಸಾಧ್ಯತೆ ಇರುತ್ತದೆ. ಅಲ್ಲದೆ, ಅಲ್ಲಿ, ಫಲಾನುಭವಿಗಳೆಂದು ಕ್ಲೇಮು ಮಾಡುತ್ತಿರುವ ವ್ಯಕ್ತಿಗಳು, ಅವರ ಕ್ಲೇಮನ್ನು ಪಣಕ್ಕೊಡ್ಡಿ ಕೋರುತ್ತಿರಬಹುದಾಗಿರುತ್ತದೆ. ಇದನ್ನು ಖಂಡಿತವಾಗಿಯೂ, ಸ್ಥಳೀಯ ಕನ್ನಡ ದಿನಪತ್ರಿಕೆಯಲ್ಲಿ ನೀಡುವ ಜಾಹೀರಾತನ್ನು ಅವಲಂಬಿಸಿ ಸಾಧಿಸಲಾಗುವುದಿಲ್ಲ.

24. ನ್ಯಾಯಾಲಯದ ಎದುರು ಈಗಿರುವ ಭೋಗ್ಯಪತ್ರದ ನವೀಕರಣಕ್ಕೆ ಸಂಬಂಧಿಸಿದ ಪ್ರಸ್ತಾವವಿದ್ದು, ಭೋಗ್ಯದಾರನು ಖಂಡಿತವಾಗಿ ಅವಶ್ಯಕ ಮತ್ತು ಯುಕ್ತ ಪಕ್ಷಕಾರನಾಗಿರುತ್ತಾನೆ. ನ್ಯಾಯಾಲಯವು, ಫಲಾನುಭವಿಗಳ ಹಿತಾಸಕ್ತಿಯಲ್ಲಿಯಾಗಲೀ ಅಥವಾ ಸಾರ್ವಜನಿಕ ಕಾರ್ಯನೀತಿಯ ವಿಷಯಗಳ ಮೇಲಾಗಲೀ ಯಾವುದೇ ನಿರ್ದಿಷ್ಟ ಆಯಾಮವನ್ನು ತಿಳಿಸಲು ಪಕ್ಷಕಾರರನ್ನು ನಿರ್ದೇಶಿಸುವುದಕ್ಕೆ ಸಂಬಂಧಿಸಿದಂಥ ಅವಶ್ಯಕತೆಯಿದೆಯೆಂದು ಭಾವಿಸಿದಲ್ಲಿ, ಭೋಗ್ಯದಾರ ಗೈರುಹಾಜರಿಯಲ್ಲಿ ಏಕರೀತಿಯ ಸಮ್ಮತಿಯನ್ನು ಖಚಿತಪಡಿಸುವ ಯಾವುದೇ ಸಾಧ್ಯತೆ ಇರುವುದಿಲ್ಲ. ಭೋಗ್ಯದಾರನ ಹಾಜರಿಯಲ್ಲಿ ನ್ಯಾಯಾಲಯದಿಂದ ಯಾವುದೇ ಅಗತ್ಯ ಬಂದಲ್ಲಿ ಸ್ಪಷ್ಟೀಕರಣಗಳನ್ನು ಒದಗಿಸುವ ಅವಶ್ಯಕತೆ ಇರುವುದಿಲ್ಲ. ಹಾಗಾಗಿ, ಮುತಾವಲಿಯ ಏಕಪಕ್ಷೀಯ ಅರ್ಜಿಯ ಮೇಲೆ ನ್ಯಾಯಾಲಯವು ಮುಂದುವರೆಯುವುದು ಯಥಾ ಪ್ರಕಾರವಾಗಿರಲಿಲ್ಲ.

25. ಹಾಗಾಗಿ, ಅಧೀನ ನ್ಯಾಯಾಲಯವು, ಪ್ರತ್ಯರ್ಜಿದಾರ ಸಂಖ್ಯೆ–1ರ ಸಂದರ್ಭದಲ್ಲಿ 18.12.2007ನೇ ದಿನಾಂಕದ ಆದೇಶಗಳನ್ನು ಹಿಂದಕ್ಕೆ ತರಿಸಿಕೊಂಡಿದ್ದಾಗ್ಯೂ ಮತ್ತು ಅವನು ಒತ್ತಿಹೇಳಿದ ಆಧಾರಗಳ ಮೇಲೆ, ಫಲಾನುಭವಿಗಳ ಉತ್ತಮ ಹಿತಾಸಕ್ತಿಯಲ್ಲಿರುವ ಮತ್ತು ಸಾರ್ವಜನಿಕ ಕಾರ್ಯನೀತಿಗೆ ಕಾನೂನುಬಾಹಿರವಾಗಿರುವ ಅಥವಾ ವಿರುದ್ಧವಾಗಿರುವ ಪ್ರಸ್ತಾವಿತ ವ್ಯವಹರಣೆಗಳನ್ನು ಅಧೀನ ನ್ಯಾಯಾಲಯವು ಮನವರಿಕೆ ಮಾಡಿಕೊಳ್ಳುವುದರೊಂದಿಗೆ, ಸದರಿ

ಪ್ರತ್ಯರ್ಜಿದಾರನ ದುರ್ಭಾವನೆಗೆ ಸಂಬಂಧಿಸಿದಂತೆ ಅರ್ಜಿದಾರರ ಭಾವೋದ್ವೇಗದ ಆಕ್ಷೇಪಣೆಗಳಲ್ಲಿ ಏನೇ ಇದ್ದರೂ, ಫಲಾನುಭವಿಗಳ ಉತ್ತಮ ಹಿತಾಸಕ್ತಿಗಳನ್ನು ತಿಳಿಸುವಲ್ಲಿ ಅದು ಸೂಕ್ತ ಮತ್ತು ಮಹತ್ವದ್ದಾಗಿದ್ದಾಗ್ಯೂ, ನ್ಯಾಯಾಲಯದ ಮನಸ್ಸಿನಲ್ಲಿ ಸ್ಫುರಿಸದ ಮತ್ತು ಬೆಳಕಿಗೆ ಬರದ ಪ್ರಸ್ತಾವಿತ ನಿರೂಪಣೆಗಳ ಮೇಲೆ ಸೂಕ್ಷ್ಮ ವ್ಯತ್ಯಾಸವನ್ನು ತರುವಂಥ ಮೌಲ್ಯಯುತ ಒಳಾಂಶಗಳು ಮತ್ತು ಅಭಿಪ್ರಾಯಗಳನ್ನು ಹೊಂದಿರುವಂಥ ಎಲ್ಲಾ ಸಂಬಂಧಪಟ್ಟ ಅಭಿಪ್ರಾಯಗಳನ್ನು ಹೊಂದುವ ದೂರದೃಷ್ಟಿಯನ್ನು ಹೊಂದಿರುತ್ತದೆ.

26. ಆದ್ದರಿಂದ, ಪ್ರತ್ಯರ್ಜಿದಾರ ಸಂ.1ನ್ನು ಒಳಗೊಂಡಂತೆ ಹಲವಾರು ಫಲಾನುಭವಿಗಳ ಅಭಿಪ್ರಾಯಗಳ ಸುನಾವಣೆಯ ಮೇಲೆ ವ್ಯವಹರಣೆಯ ವಿವರಗಳನ್ನು ಪರಿಗಣಿಸುವ ಅವಶ್ಯಕತೆ ಇರುತ್ತದೆ.

27. ಆದಾಗ್ಯೂ, ಪ್ರಶ್ನಿತ ಆದೇಶವನ್ನು ಅನುಸರಿಸಲು ಸಮರ್ಥರಾಗಿರುವ ಅರ್ಜಿದಾರರ ತಕ್ಷಣದ ಸಮಸ್ಯೆಗೆ ಸ್ಪಂದಿಸಲು ಅಧೀನ ನ್ಯಾಯಾಲಯವು ಸಂಬಂಧಪಡುವುದಿಲ್ಲ. ಇದರಿಂದ ಆದೇಶಕ್ಕೆ ಪೂರ್ಣ ಪರಿಣಾಮವನ್ನು ನೀಡಲು, ಎಲ್ಲಾ ಸಂಬಂಧಪಟ್ಟವರೂ, 18.1.2007ನೇ ದಿನಾಂಕದ ಆದೇಶವನ್ನು ಮೊದಲು ಅಸ್ತಿತ್ವದಲ್ಲಿದ್ದ ಸ್ಥಿತಿಗೆ ಅದನ್ನು ತರಬೇಕಾಗಿರುತ್ತದೆ. ಇದನ್ನು ಪೂರ್ವಸ್ಥಿತಿಗೆ ತರಲು ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಮತ್ತು ಹಲವಾರು ಮೂರನೇ ಪಕ್ಷಕಾರರನ್ನು ಒಳಗೊಂಡಂತೆ ಪೂರ್ವಸ್ಥಿತಿಗೆ ತರುವ ವ್ಯವಹರಣೆಗಳ ಸರಣಿಯನ್ನೇ ರೂಪಿಸಬೇಕಾಗುತ್ತದೆ. ಯಾವುದೇ ಅಂಥ ವ್ಯವಹರಣೆಗಳನ್ನು ಈವರೆಗೂ ಪರಿಗಣಿಸಿರುವುದಿಲ್ಲ. ಅಂಥ ಪೂರ್ವಸ್ಥಿತಿಗೆ ತರುವ ವ್ಯವಹರಣೆಗಳ ಪರಿಗಣನೆ ಮತ್ತು ಅನುಷ್ಠಾನ ಸಂಪೂರ್ಣವಾಗಿ ತೊಡಕಿನದು ಮತ್ತು ಕೊನೆಯಿಲ್ಲದಾಗಿರುತ್ತದೆ. ಅದು ಸ್ವಾಗತಾರ್ಹವಾದುದಾಗಿರುವುದಿಲ್ಲ. ಆದ್ದರಿಂದ, 18.12.2007ನೇ ದಿನಾಂಕದ ಆದೇಶವನ್ನು ಪುನಃ ಹಿಂದಕ್ಕೆ ಪಡೆದುಕೊಳ್ಳುವಂತೆ ನಿರ್ದೇಶಿಸುವ ಪ್ರಶ್ನಿತ ಆದೇಶವನ್ನು ಅನುಸರಿಸಿ ನಡೆಸಿದ ಎಲ್ಲಾ ಕ್ರಮಗಳು ಇಂದಿನಿಂದ ವಿಪರ್ಯಯಗೊಳ್ಳುತ್ತವೆಂದು

ಅದೇ ಸಂಗತಿಯಿಂದ ಅಗತ್ಯಪಡಿಸುವಂತಿಲ್ಲವೆಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಅಧೀನ ನ್ಯಾಯಾಲಯಗಳು, ಎಲ್ಲಾ ಫಲಾನುಭವಿಗಳನ್ನು ವ್ಯವಹರಣೆಗಳಿಗೆ ಪಕ್ಷಕಾರರನ್ನಾಗಿ ಮಾಡಬೇಕೆಂದು ಮತ್ತು ಅವರೆಲ್ಲರಿಗೂ ವ್ಯವಹರಣೆಗಳಲ್ಲಿ ವೈಯಕ್ತಿಕ ನೋಟೀಸುಗಳನ್ನು ನೀಡಬೇಕೆಂದು ನಿರ್ದೇಶಿಸಿದಲ್ಲಿ ಅದು ಸಾಕಾಗುತ್ತದೆ. ವಾರ್ತಾಪತ್ರಿಕೆಯ ಪ್ರಕಟಣೆಗೆ ವ್ಯಾಪಕ ಪ್ರಸಾರವಿರುವ ಉರ್ದು ದಿನಪತ್ರಿಕೆಯನ್ನು ಒಳಗೊಂಡಂತೆ ವ್ಯಾಪಕ ಪ್ರಸಾರವಿರುವ ವಾರ್ತಾಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

28. ಅವಶ್ಯಕವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ಮೇಲೆ, ಯುಕ್ತವೆಂದು ಭಾವಿಸಿದಂಥ ಕಾರ್ಯವಿಧಾನವನ್ನು ಅಳವಡಿಸಿಕೊಂಡಾಗ, ಸಮರ್ಥಿಸಿಕೊಳ್ಳಬಹುದಾದಂಥ ಒಪ್ಪೋಲೆಯೊಂದಿಗೆ ಪೂರಕವಾಗಿರಬೇಕೆಂದು, ಈಗಾಗಲೇ ಕಾರ್ಯರೂಪಕ್ಕೆ ತಂದಿರಬಹುದಾದಂಥ ಭೋಗ್ಯಪತ್ರದ ಮೇಲೆ ಒಟ್ಟಾಭಿಪ್ರಾಯಕ್ಕೆ ಬರುವಲ್ಲಿ ಪಕ್ಷಕಾರರು ನೆರವು ನೀಡತಕ್ಕದ್ದು. ಉತ್ತರಾಧಿಕಾರಿ ಬರುವ ಅಂತರ ಕಾಲದಲ್ಲಿ ಮಧ್ಯೆಪ್ರವೇಶಿಸಬಹುದಾದಂಥ ಮೂರನೇ ಪಕ್ಷಕಾರರನ್ನು ದೃಷ್ಟಿಯಲ್ಲಿಟ್ಟುಕೊಂಡಾಗ, ಅಕಾರಣವಾಗಿ ಮತ್ತು ಅನುಚಿತವಾಗಿ ಭೋಗ್ಯದಾರನ ವಾಣಿಜ್ಯ ಹಿತಾಸಕ್ತಿಗಳು ವಿಪತ್ತುಗಳಿಗೊಳಗಾಗದಿರುವಾಗ, ಫಲಾನುಭವಿಗಳ ಹೆಸರಿನಲ್ಲಿ ಗುತ್ತಿಗೆಯನ್ನು ಮಾಡಿಕೊಳ್ಳಬಹುದಾದ ಯಾವುದೇ ಉತ್ತಮ ನಿಬಂಧನೆಗಳಾಗಬಹುದಾಗಿದ್ದಲ್ಲಿ ಪರಿಗಣಿಸಲು ಮಾತ್ರ ಪ್ರಯತ್ನಿಸಲಾಗಿರುತ್ತದೆ. ಅಧೀನ ನ್ಯಾಯಾಲಯವು, ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ, ಆರು ತಿಂಗಳ ಅವಧಿಯೊಳಗೆ ವ್ಯವಹರಣೆಗಳನ್ನು ಪೂರ್ಣಗೊಳಿಸಲು ಶ್ರಮಿಸತಕ್ಕದ್ದು.

29. ತದನುಸಾರವಾಗಿ, ರಿಟ್ ಅರ್ಜಿಗಳನ್ನು ಮೇಲಿನ ನಿರೂಪಣೆಗಳಲ್ಲಿ ವಿಲೇಖಿಸಲಾಗಿರುತ್ತದೆ.

---